# ರಿಸರ್ವ್ ಬ್ಯಾಂಕ್ - ಇಂಟಿಗ್ರೇಟೆಡ್ ಒಂಬುಡ್ಸ್‌ಮನ್ ಯೋಜನೆ, 2021

## ಪ್ರಮುಖ ಅಂಶಗಳು

**ಒಂಬುಡ್ಸ್‌ಮನ್ ಯೋಜನೆಯು ಇವುಗಳ ಗ್ರಾಹಕರನ್ನು ಒಳಗೊಳ್ಳುತ್ತದೆ**

- ಡೆಪಾಸಿಟ್ ತೆಗೆದುಕೊಳ್ಳುವ ಎಲ್ಲಾ ಎನ್‌ಬಿಎಫ್‌ಸಿ-ಗಳು
- ಅಸೆಟ್ ಸೈಜ್ ರೂ. 100 ಕೋಟಿ ಅಥವಾ ಹೆಚ್ಚು + ಗ್ರಾಹಕರೊಂದಿಗೆ ಮಾತುಕತೆಯ ಸ್ಥಳ ಇರುವ ಎನ್‌ಬಿಎಫ್‌ಸಿ-ಗಳು (ಇವುಗಳನ್ನು ಬಿಟ್ಟು: ಇನ್‌ಫ್ರಾಸ್ಟ್ರಕ್ಚರ್ ಫೈನಾನ್ಸ್ ಕಂಪನಿಗಳು, ಕೋರ್ ಇನ್‌ವೆಸ್ಟ್‌ಮೆಂಟ್ ಕಂಪನಿಗಕಳು, ಇನ್‌ಫ್ರಾಸ್ಟ್ರಕ್ಚರ್ ಡೆಟ್ ಫಂಡ್ ಮತ್ತು ಲಿಕ್ವಿಡೇಶನ್ ಅಡಿಯಲ್ಲಿರುವ ಎನ್‌ಬಿಎಫ್‌ಸಿ-ಗಳು)

ಗ್ರಾಹಕರಿಗೆ ಆರ್ಥಿಕ ನಷ್ಟ ಅಥವಾ ಧಕ್ಕೆಯನ್ನು ಉಂಟುಮಾಡಿರುವ ಅಥವಾ ಉಂಟುಮಾಡದೆ ಇರುವ, ಆದರೆ ಒಂದು ರೆಗ್ಯುಲೇಟೆಡ್ ಎಂಟಿಟಿಯು ಕಾನೂನುಬದ್ಧವಾಗಿ ಅಥವಾ ಅದಲ್ಲದೆಯೆ ಒದಗಿಸಲೇಬೇಕಾದ ಆರ್ಥಿಕ ಸೇವೆಯಲ್ಲಿನ ಯಾವುದೇ ಕೊರತೆ ಅಥವಾ ಅಸಮರ್ಪಕತೆಯನ್ನು **''ಸರ್ವೀಸ್‌ನಲ್ಲಿ ಕೊರತೆ''** ಎಂದು ಕರೆಯಲಾಗುತ್ತದೆ.

### ದೂರಿಗೆ ಆಧಾರಗಳು

ಈ ಯೋಜನೆಯ ಅಡಿಯಲ್ಲಿ, ಯಾವುದೇ ಗ್ರಾಹಕರು ಕೂಡ **''ಸರ್ವೀಸ್‌ನಲ್ಲಿ ಕೊರತೆ''**ಯ ಅಡಿಯಲ್ಲಿ ಸ್ಪಷ್ಟಪಡಿಸಿರುವ ಹಾಗೆ, ಸ್ವತಃ ಅಥವಾ ಒಬ್ಬ ಅಧಿಕೃತ ಪ್ರತಿನಿಧಿಯ ಮೂಲಕ, ಸರ್ವೀಸ್‌ನಲ್ಲಿ ಕೊರತೆಗೆ ಕಾರಣವಾದಂತಹ ರೆಗ್ಯುಲೇಟೆಡ್ ಎಂಟಿಟಿಯ ಯಾವುದೇ ಕೆಲಸ ಅಥವಾ ಲೋಪದ ಬಗ್ಗೆ ದೂರು ಸಲ್ಲಿಸಬಹುದು.

### ದೂರು ಸಮರ್ಥನೀಯವಾಗದೆ ಇರುವುದಕ್ಕೆ ಆಧಾರಗಳು

ಈ ಯೋಜನೆಯ ಅಡಿಯಲ್ಲಿ ಸಮರ್ಥನೀಯವಲ್ಲದ ದೂರುಗಳ ಬಗ್ಗೆ ತಿಳಿದುಕೊಳ್ಳಲು, ದಯವಿಟ್ಟು **ಆರ್‌ಬಿಐ ಇಂಟಿಗ್ರೇಟೆಡ್ ಒಂಬುಡ್ಸ್‌ಮನ್ ಯೋಜನೆ, 2021ರ ಕ್ಲಾಸ್ 10ನ್ನು ನೋಡಿ.**

## ಗ್ರಾಹಕರು ಹೇಗೆ ದೂರನ್ನು ಸಲ್ಲಿಸಬಹುದು?

ಸಂಬಂಧಪಟ್ಟ ಎನ್‌ಬಿಎಫ್‌ಸಿ-ಗೆ ಲಿಖಿತ ಮನವಿ ಸಲ್ಲಿಸುವ ಮೂಲಕ → ಒಂದು ತಿಂಗಳ ಕೊನೆಯಲ್ಲಿ → ಎನ್‌ಬಿಎಫ್‌ಸಿ-ಯಿಂದ ಉತ್ತರ ಬರದಿದ್ದರೆ ಅಥವಾ ಎನ್‌ಬಿಎಫ್‌ಸಿ-ಯ ಉತ್ತರದಿಂದ ಗ್ರಾಹಕರಿಗೆ ತೃಪ್ತಿಯಾಗದಿದ್ದರೆ → ಗ್ರಾಹಕರು ಯಾವುದೇ ಫೋರಮ್‌ಗೆ ಹೋಗಿರದಿದ್ದರೆ → ಆರ್‌ಬಿಐ ಒಂಬುಡ್ಸ್‌ಮನ್‌ರಿಗೆ ದೂರು ಸಲ್ಲಿಸಿ (ಎನ್‌ಬಿಎಫ್‌ಸಿ-ಯಿಂದ ಉತ್ತರ ಬಂದು ಒಂದು ವರ್ಷವಾಗುವುದರ ಒಳಗೆ)

ಮುಖ್ಯ ನೋಡಲ್ ಆಫೀಸರ್‌ರ ಹೆಸರು ಮತ್ತು ಸಂಪರ್ಕ ವಿವರಗಳು:

**ಹೆಸರು** : Mr. Arijit Sen

**ಟೆಲಿಫೋನ್** : 08045860196

**ಇ-ಮೇಲ್ ಐಡಿ** : grievance.finance@adityabirlacapital.com

ಸೆಂಟ್ರಲೈಸ್ಡ್ ರಿಸೀಟ್ ಅಂಡ್ ಪ್ರಾಸೆಸಿಂಗ್ ಸೆಂಟರ್‌ನ (ಸಿಆರ್‌ಪಿಸಿ) ಸಂಪರ್ಕ ವಿವರಗಳು:

ಒಂಬುಡ್ಸ್‌ಮನ್‌ರಿಗೆ ದೂರು ಸಲ್ಲಿಸುವ ಪೋರ್ಟಲ್:
**https://cms.rbi.org.in**

**ವಿಳಾಸ** : ಸೆಂಟ್ರಲೈಸ್ಡ್ ರಿಸೀಟ್ ಅಂಡ್ ಪ್ರಾಸೆಸಿಂಗ್ ಸೆಂಟರ್, ರಿಸರ್ವ್ ಬ್ಯಾಂಕ್ ಆಫ್ ಇಂಡಿಯ, 4ನೇ ಮಹಡಿ, ಸೆಕ್ಟರ್-17, ಚಂದೀಗಢ್ - 160017.

**ಈ ಟೋಲ್ ಫ್ರೀ ನಂಬರ್‌ಗೆ ಕರೆ ಮಾಡಿರಿ:** 14448,
ಬೆಳಗ್ಗೆ ಗಂಟೆ 9:30 ಮತ್ತು ಸಾಯಂಕಾಲ ಗಂಟೆ 5:15ರ ನಡುವೆ

## ಒಂಬುಡ್ಸ್‌ಮನ್ ಹೇಗೆ ನಿರ್ಧಾರವನ್ನು ಕೈಗೊಳ್ಳುತ್ತದೆ?

- ಒಂಬುಡ್ಸ್‌ಮನ್ ಎದುರಿನ ಕಾರ್ಯಕಲಾಪಗಳು ಸಾರಾಂಶ ರೂಪದ್ದಾಗಿರುತ್ತವೆ
- ರಾಜಿ ಒಪ್ಪಂದದ ಮೂಲಕ ಇತ್ಯರ್ಥ ಮಾಡಲು ಯತ್ನಿಸುತ್ತದೆ ➡ ಅದು ಆಗದಿದ್ದರೆ, ಅವಾರ್ಡ್/ಆರ್ಡರ್ ಕೊಡಬಹುದು

## ಒಂಬುಡ್ಸ್‌ಮನ್ ನಿರ್ಧಾರದಿಂದ ತೃಪ್ತಿಯಾಗದಿದ್ದರೆ, ಗ್ರಾಹಕರು ಅಪೀಲು ಮಾಡಬಹುದೇ?

**ಮಾಡಬಹುದು,** ಒಂಬುಡ್ಸ್‌ಮನ್ ನಿರ್ಧಾರದ ವಿರುದ್ಧ ಅಪೀಲು ಮಾಡಬಹುದು. ಅದಕ್ಕೆ ಸಂಪರ್ಕಿಸಿ - ದಿ ಅಪೆಲ್ಲೇಟ್ ಅಥಾರಿಟಿ - ಈ ಯೋಜನೆಯ ಆಡಳಿತ ನಡೆಸುವ ರಿಸರ್ವ್ ಬ್ಯಾಂಕ್ ಡಿಪಾರ್ಟ್‌ಮೆಂಟ್‌ನ ಮುಖ್ಯಸ್ಥರಾದ ಎಕ್ಸಿಕ್ಯುಟಿವ್ ಡೈರೆಕ್ಟರ್

**ಗಮನಿಸಿ:** • ಇದು ವಿವಾದ ಪರಿಹಾರದ ಒಂದು ಪರ್ಯಾಯ ವ್ಯವಸ್ಥೆ
• ಗ್ರಾಹಕರು ಯಾವುದೇ ಹಂತದಲ್ಲಿಯೂ ಪರಿಹಾರಕ್ಕಾಗಿ ಬೇರೆ ಯಾವುದೇ ನ್ಯಾಯಾಲಯ/ಫೋರಮ್/ಪ್ರಾಧಿಕಾರಕ್ಕೆ ಹೋಗಲು ಸ್ವತಂತ್ರರಾಗಿರುತ್ತಾರೆ.

ಯೋಜನೆಯ ಹೆಚ್ಚಿನ ವಿವರಗಳಿಗೆ ನೋಡಿ: **www.rbi.org.in**

ABC/KAN/VER1.0/APR 2025

**Aditya Birla Capital Limited**
Corporate Office: One World Center, Tower 1, 18th Floor, Jupiter Mill Compound, 841, Senapati Bapat Marg, Elphinstone Road, Mumbai - 400 013
Registered Office: Indian Rayon Compound, Veraval, Gujarat - 362 266
Tel: +91 22 6723 9101 | Toll-free number 1800-270-7000
CIN: L67120GJ2007PLC058890 | www.adityabirlacapital.com